


ಭಾನುವಾರ ರಾತ್ರಿ ಇವರಿಗೆಲ್ಲಾ ಹಬ್ಬ. ನಾಳೆಯಿಂದ ಮತ್ತೆ ರೋಡುಗಳು ಭರ್ಜರಿಯಾಗಿ ತುಂಬಿಕೊಂಡಿರುತ್ತವೆ ಎಂಬುದು ಪ್ರತೀವಾರದ ಆ ಖುಷಿಗೆ ಕಾರಣ. ಅಲ್ಲಿ ಇಲ್ಲಿ ಕೆಲಸಕ್ಕೆ ಸೇರಿದವರು ಊಟ ಮುಗಿಸಿ ಹೋಗಿ ಮಲಗಿಕೊಂಡರೆ ಸಿಗ್ನಲ್ಲು ಮತ್ತು ಅಂಗಡಿ ವಿಸಿಟ್‌ನವರು ಮಾತ್ರ ಎಚ್ಚರವಿದ್ದರು. ತಮಗೆ ತೋಚಿದ್ದನ್ನು ಮಾಡಿ ಎಲ್ಲರ ಮನರಂಜಿಸುವ ಆಟ ನಡೆಯುತ್ತಿತ್ತು. ತನ್ನ ಸರದಿ ಬಂದಾಗ ರಾಧಾ ಒಳಗೆ ಓಡಿ ಹೋದಳು. ಎಲ್ಲರೂ 'ಏಯ್ ಏಯ್...' ಎಂದು ಕೂಗಿದರು. 'ಶ್' ಎಂದಳು ರಾಧ. ಒಳಗಿನ ಹಳದಿ ಬಲ್ಬಿನ ಬೆಳಕು ಹೊರಗಿನ ನೆಲದ ಮೇಲೆ ಅವಳ ನೆರಳನ್ನು ದಟ್ಟವಾಗಿ ಮೂಡಿಸಿತ್ತು. ಕ್ಷಣಕಾಲ ಅಲ್ಲಾಡಿದ ನೆರಳು ಮೆಲ್ಲಗೆ ಹೆಜ್ಜೆ ಇಡಲತ್ತಿತ್ತು. ಜೊತೆಗೆ ರಾಧಾಳ ಬಾಯಿಂದ 'ಜಿಂಗ್ ಚಕ್ಕ... ಜಿಂಗ್ ಚಕ್ಕ... ಜಿಂಗ್ ಚಕ್ಕ... ಜಿಂಗ್ ಚಕ್ಕ...' ಎಂಬ ಸಂಗೀತವೂ ಶುರುವಾಯಿತು. ವೈಯ್ಯಾರದಿಂದ ನೆಡೆದುಕೊಂಡು ಬರುತಿದ್ದ ರಾಧಾಳನ್ನು ಕಂಡು ಕೆಲವರಿಗೆ ಅಲ್ಲಿ ಇಲ್ಲಿ ಕೇಳಿದ ಬಾಂಡ್ ಸಿನಿಮಾ ಮ್ಯೂಸಿಕ್ಕು ನೆನಪಾಗಿ ವಿಶಲ್ಲು ಹೊಡೆದು ಚಪ್ಪಾಳೆ ತಟ್ಟಲು ಶುರುಮಾಡಿದರು. ಉಳಿದವರಿಗೆ ರಾಧಾಳ ವೈಯ್ಯಾರವೇ ಸಾಕಾಯಿತು ನಗು ಬರಿಸಲು. 'ಜಿಂಗ್ ಚಕ್ಕ... ಜಿಂಗ್ ಚಕ್ಕ... ಜಿಂಚಜಾವ್...' ಎನ್ನುತ್ತಾ ನೆರಳು ಮತ್ತು ಮ್ಯೂಸಿಕ್ಕಿನೊಂದಿಗೆ ಮುಂದೆ ಬಂದು ನಿಂತು, ಸೊಂಟದ ಮೇಲೆ ಕೈಯಿಟ್ಟುಕೊಂಡು ಕಾದು ಎಲ್ಲರ ಮುಖ ನೋಡಿದ ರಾಧಾ, ಕೊನೆಗೆ ಇನ್ನೂ ನಾಚುತ್ತಾ 'ಚಕಾ' ಎಂದು ತಮ್ಮ ಎಂದಿನ ಶೈಲಿಯ ಚಪ್ಪಾಳೆಯನ್ನು ಇಡೀ ಸಭೆಗೆ ಬಡಿದು ಸರಿಯಾಗಿ ಮ್ಯೂಸಿಕ್ಕು ನಿಲ್ಲಿಸಿದಳು. ಇಪ್ಪತ್ತು ಇಪ್ಪತ್ತೈದು ಜನರ ಸಭೆ ಒಮ್ಮೆಲೇ ಕೇಕೆ ಹಾಕಿತು. 'ಒನ್ಸ್ ಮೋರ್ ಒನ್ಸ್ ಮೋರು'ಗಳು